ಬಾಲಿವುಡ್ ಚೆಲುವೆ ರೇಖಾ ತಾವು ಹೋಗುವ ಯಾವುದೇ ಸಮಾರಂಭಕ್ಕೆ ಖಾಡಾ ದುಬಾರಿ ಸಲ್ವಾರ್ ಮೇಲೆ ಖಾಡಾ ದುಪಟ್ಟಾ ಧರಿಸದೇ ಇರುವುದಿಲ್ಲ. ಈ ನಟಿಯಿಂದಲೇ ಖಾಡಾ ದುಪಟ್ಟಾ ಮತ್ತೆ ಅಖಾಡಕ್ಕೆ ಬಂದಿದೆ. ರಾಯಲ್ ಲುಕ್ ನೀಡುತ್ತಾ ಫ್ಯಾಷನ್‌ಪ್ರಿಯರ ಮನತಣಿಸುತ್ತಿದೆ.

ಓಡನೀ, ಚುನ್ರಿ, ಚುನ್ನಿ, ವೇಲ್, ಚಾದರ್, ಸ್ಟೋಲ್, ದುಪಟ್ಟಾ... ಹೀಗೆ ನಾನಾ ತರಹದ ಹೆಸರಿನಿಂದ ಕರೆಯಲ್ಪಡುವ ಈ ದುಪಟ್ಟಾಗಳು ಇಂದು ಹೆಣ್ಣು ಮಕ್ಕಳ ಹಾಟ್ ಫೇವರೆಟ್ ಆಗಿದೆ. ಆಧುನಿಕತೆ ಬೆಳೆದಂತೆ ಇದು ಮಲ್ಟಿಪರ್ಪಸ್ ಫ್ಯಾಷನ್ ಆಗಿ ಪರಿವರ್ತನೆಗೊಂಡಿದೆ. ಈ ದುಪಟ್ಟಾಗಳ ಕ್ರೇಜ್ ಹುಡುಗಿಯರನ್ನು ಮಾತ್ರವಲ್ಲ ಹುಡುಗರನ್ನೂ ಆಕರ್ಷಿಸುತ್ತಿದೆ ಎಂಬುದು ಅಚ್ಚರಿಯಾಗಿ ಉಳಿದಿಲ್ಲ. ಶುಭ



ಸಮಾರಂಭಗಳಲ್ಲಿ ಯುವಕರು ತಾವು ಧರಿಸುವ ಯಾವುದೇ ಉಡುಪುಗಳ ಮೇಲೆ ರಾಯಲ್ ಹಾಗೂ ಗ್ರ್ಯಾಂಡ್ ಲುಕ್ ನೀಡುವ ವಿವಿಧ ವಿನ್ಯಾಸದ ಸ್ಟೋಲ್‌ಗಳನ್ನು ಧರಿಸಿ ಸುಖತ್ತಾಗಿ ಮಿಂಚುತ್ತಿದ್ದಾರೆ.

ಮೊದಲೆಲ್ಲಾ ಕೇವಲ ಚೂಡಿದಾರ್ ಹಾಗೂ ಸಲ್ವಾರ್‌ಗಳ ಮೇಲೆ ತೊಡುತ್ತಿದ್ದ ಈ ದುಪಟ್ಟಾಗಳು ಈಗ ಬಗೆ ಬಗೆಯ ಉಡುಪುಗಳಿಗೆ ಮ್ಯಾಚ್ ಆಗುತ್ತಿರುವುದು ಹೊಸ ವಿಷಯ. ಹಾಗಾಗಿ ಕುರ್ತಾ, ಶಾರ್ಟ್ ಟಾಪ್, ಲಾಂಗ್ ಟಾಪ್, ಲಾಂಗ್ ಟೀ ಶರ್ಟ್, ಲಾಂಗ್ ಸ್ಕರ್ಟ್, ಶಾರ್ಟ್ ಸ್ಕರ್ಟ್ ಮುಂತಾದ ಕ್ಯಾಶುವಲ್ ಉಡುಪುಗಳ ಮೇಲೆ ಕೂಡ ಈ ದುಪಟ್ಟಾಗಳನ್ನು ಬಳಸುತ್ತಿರುವುದು ಫ್ಯಾಷನ್ ಟ್ರೆಂಡ್ ಆಗಿದೆ. ಇದಲ್ಲದೆ ಗಾಗ್ರಾ ಚೋಲಿ, ಲಂಗ ದಾವಣಿಗಳ ಮೇಲೂ ಬಳಸಲಾಗುತ್ತಿದೆ. ಇವೆಲ್ಲವೂ ಇಂದಿನ ಕಾಲದ ತರುಣಿಯರಿಗೆ ಪಕ್ಕಾ ಟಿಪಿಕಲ್ ಲುಕ್ ನೀಡುವುದಂತೂ ಸುಳ್ಳಲ್ಲ. ಈ ಹಿಂದೆ ಸಾಂಪ್ರದಾಯಿಕ ಉಡುಪುಗಳೊಂದಿಗೆ ಬಳಸಲಾಗುತ್ತಿದ್ದ ಈ ದುಪಟ್ಟಾ ಇಂದು ಫ್ಯಾಷನ್‌ಗೆ ತಕ್ಕಂತೆ ಬದಲಾವಣೆಗೊಂಡಿರುವುದಂತೂ ನಿಜ.

## ದುಪಟ್ಟಾ ವೈವಿಧ್ಯ

ಕಾಟನ್, ಸಿಂಥೆಟಿಕ್, ಎಂಬ್ರಾಯಿಡರಿ, ಫ್ಯಾನ್ಸಿ ಬಾರ್ಡರ್, ಮಿಕ್ಸ್ ಆ್ಯಂಡ್ ಮ್ಯಾಚ್ ದುಪಟ್ಟಾಗಳು, ಚಮಕಿ ವರ್ಕ್, ಸ್ಟೋನ್ ವರ್ಕ್, ಗಾಜಿನಿಂದ ಕುಸುರಿ ಕೆಲಸ ಮಾಡಿದ ದುಪಟ್ಟಾಗಳು, ಸಿಲ್ವರ್ ಥ್ರೆಡ್, ಗ್ಲಿಟ್ಟರ್‌ನಿಂದ ವರ್ಕ್ ಮಾಡಿದ ದುಪಟ್ಟಾಗಳು, ಸಿಲ್ಕ್ ದುಪಟ್ಟಾಗಳು, ಹ್ಯಾಂಡ್ ವರ್ಕ್, ಪ್ಯಾಚ್ ವರ್ಕ್, ಜರ್ದೋಸಿ ವರ್ಕ್... ಹೀಗೆ ಸಾಕಷ್ಟು ವೈವಿಧ್ಯಮಯ ದುಪಟ್ಟಾಗಳು ಇದೀಗ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ.

ಸುಮಾರು 17ನೇ ಶತಮಾನದ ಆರಂಭದಲ್ಲಿ, ಮೊಘಲ್ ಸಾಮ್ರಾಜ್ಞಿ ನೂರ್ ಜಹಾನ್ 'ಸ್ಟೈಲ್ ಐಕಾನ್' ಎಂದೇ ಗುರುತಿಸಿಕೊಂಡವರು. ಅಂದಿನ ಜಮಾನಾದಲ್ಲಿಯೇ ಬೇರೆ ಬೇರೆ ದೇಶಗಳಿಂದ ಉಡುಪುಗಳನ್ನು ತಯಾರಿಸಲು ಕುಶಲಕರ್ಮಿಗಳನ್ನು ಆಹ್ವಾನಿಸುವುದು ಅವರ ವಾಡಿಕೆಯಾಗಿತ್ತು. ಹಾಗೆಯೇ ನೂರ್‌ಜಹಾನ್ ಟರ್ಕಿ ಮತ್ತು ಪರ್ಷಿಯನ್ ಕುಶಲಕರ್ಮಿಗಳನ್ನು ರಾಜಮನೆತನದ ಉಡುಪು ತಯಾರಿಸಲು ಆಹ್ವಾನಿಸುತ್ತಿದ್ದರು, ವಿಶೇಷವಾಗಿ ಮೊಘಲ್ ರಾಜಮನೆತನದ ಮಹಿಳೆಯರು ಹಾಗೂ ಅವರ ಕುಟುಂಬದ ಸದಸ್ಯರಿಗೆ ಮಾತ್ರ ಆ ಕುಶಲಕರ್ಮಿಗಳು ಉಡುಪುಗಳನ್ನು ತಯಾರಿಸುತ್ತಿದ್ದರು.

ಆದರೆ ನಂತರ, ನಿಜಾಮರ ಆಡಳಿತ ಪ್ರಾರಂಭವಾದಾಗ ಬೇಗಂಗಳು ಮೊಘಲ್ ಶೈಲಿಯನ್ನು ಅಳವಡಿಸಿಕೊಂಡು ಅದನ್ನು ಸೃಜನಾತ್ಮಕವಾಗಿ ಮಾರ್ಪಡಿಸಿ ಖಾಡಾ ದುಪಟ್ಟಾವನ್ನು ರೂಪಿಸಿದರು ಎಂಬುದು ಇತಿಹಾಸ. ಈ ಖಾಡಾ ದುಪಟ್ಟಾವನ್ನು ರೇಷ್ಮೆ ಬಟ್ಟೆಯ ಮೇಲೆ ಶುದ್ಧ ಚಿನ್ನ ಮತ್ತು ಬೆಳ್ಳಿಯ ದಾರಗಳಿಂದ ನೇಯಲಾಗುತ್ತದೆ, ಇದನ್ನು ಜರ್ದೋಸಿ ಕಸೂತಿ ಎಂದು ಕರೆಯಲಾಗುತ್ತದೆ. ಮೊದಲೆಲ್ಲಾ ಈ ಖಾಡಾ ದುಪಟ್ಟಾ ಭಾರತೀಯ ಉಪಖಂಡದ ಹೈದರಾಬಾದ್ ಮುಸ್ಲಿಂ ವಧುಗಳ ಸಾಂಪ್ರದಾಯಿಕ ಮದುವೆಯ ಉಡುಗೆಯಾಗಿತ್ತು. ಇದು ಕುರ್ತಾ, ಚೂಡಿದಾರ್ ಎಂದರೆ ಉದ್ದದ ಸ್ಲಿಮ್ ಪ್ಯಾಂಟ್ ಮತ್ತು ಆರು ಗಜದ ದುಪಟ್ಟಾವನ್ನು ಒಳಗೊಂಡಿದೆ.

## ಖಾಡಾ ದುಪಟ್ಟಾ ಧರಿಸುವ ಶೈಲಿ

ದುಪಟ್ಟಾದ ಮಧ್ಯದ ಅತ್ಯಂತ ಮೇಲ್ಭಾಗವನ್ನು ಕುರ್ತಾದ ಹಿಂಭಾಗಕ್ಕೆ ಪಿನ್‌ನಿಂದ ಸಿಕ್ಕಿಸಲಾಗುತ್ತದೆ. ದುಪಟ್ಟಾದ ಸುತ್ತಲಿರುವ ಅಂಚುಗಳನ್ನು ಅತ್ಯಂತ ಹೆವಿ ಜರ್ದೋಸಿ ವರ್ಕ್‌ನಿಂದ ಅಲಂಕರಿಸಿದ್ದು, ಎರಡೂ ತುದಿಗಳನ್ನು ನೀಟಾಗಿ ಒಂದರ ಮೇಲೊಂದರಂತೆ ನೆರಿಗೆ ಮಾಡಿ ಇವುಗಳಿಗೆ ಬ್ರೋಚ್ ಅಳವಡಿಸಿ ಎಡಭುಜದ ಮೇಲೆ ಇರಿಸಲಾಗುತ್ತದೆ. ದುಪಟ್ಟಾದ ಇನ್ನೊಂದು ತುದಿಗಳನ್ನು ಬಲ ಭುಜದ ಕೆಳಗೆ ಮತ್ತು ಬಲ ಮೊಣಕೈಯ ಒಳಭಾಗಕ್ಕೆ ಸುತ್ತಿ ಧರಿಸಲಾಗುತ್ತದೆ. ಇನ್ನು ಖಾಡಾ ದುಪಟ್ಟಾದ ಜೊತೆಗೆ ಧರಿಸುವ ಹೈದರಾಬಾದಿ ಕುರ್ತಾವು ಕಸೂತಿಯಿಂದ ಅಲಂಕರಿಸಲ್ಪಟ್ಟಿರುತ್ತದೆ. ಇನ್ನು ಇದಕ್ಕೊಪ್ಪುವ ಪ್ಯಾಂಟ್ ಕೂಡ ಅತ್ಯಂತ ಆಕರ್ಷಕವಾಗಿದ್ದು, ಈ ವಿಶೇಷ ಉಡುಪು ಒಮ್ಮೆ ನೋಡಿದರೆ ಸಾಲದು ಎಂಬಂತಿರುತ್ತದೆ. ಮತ್ತೆ ಮತ್ತೆ ನೋಡುವ ತವಕವೂ ಹೆಚ್ಚಾಗುತ್ತದೆ. ಇಷ್ಟು ಆಕರ್ಷಣೆಗಳಿಂದ ಕೂಡಿದ ಈ ಹೈದರಾಬಾದಿ ಉಡುಪು ಇದೀಗ ಸೆಲೆಬ್ರಿಟಿಗಳು ಹಾಗೂ ಮಾಡೆಲ್‌ಗಳ ವಾರ್ಡ್‌ರೋಬ್ ಸೇರಿವೆ.

ಈ ತರಹದ ದುಪಟ್ಟಾ ಶೈಲಿ ಸೋಷಿಯಲ್ ಮೀಡಿಯಾದಲ್ಲಿಯೂ ವೈರಲ್ ಆದದ್ದು ಹಿಂದಿ ಚಿತ್ರರಂಗದ ಮೇರು ನಟಿ ರೇಖಾ ಅವರಿಂದ. ರೇಖಾ ತಾವು ಹೋಗುವ ಯಾವುದೇ ಸಭೆ ಸಮಾರಂಭವಿರಲೀ ಉಡುಪುಗಳ ಜೊತೆ ಏನಾದರೊಂದು ಹೊಸ ಪ್ರಯೋಗಕ್ಕೆ ಒತ್ತು ನೀಡುತ್ತಾರೆ. ಇದೀಗ ಒಂದು ಸಮಾರಂಭದಲ್ಲಿ ರೇಖಾ ಧರಿಸಿದ್ದ ಹಾಫ್ ವೈಟ್ ಬಣ್ಣದ ಉಡುಪಿನ ಜೊತೆಗೆ ಖಾಡಾ ದುಪಟ್ಟಾ ಶೈಲಿ ಅವರಿಗೆ 'ಸ್ಟೈಲ್ ರಾಣಿ' ಎಂಬ ಹೆಸರನ್ನೂ ತಂದುಕೊಟ್ಟಿತ್ತು. ಇದರ ಜೊತೆಗೆ ರೇಖಾ ಅವರ ಉಡುಪು ಅತ್ಯಂತ ವಿಭಿನ್ನವಾಗಿದ್ದು, ಕಸೂತಿ ಮತ್ತು ವಿಶಿಷ್ಟ ಕಲೆಯಿಂದ ತಯಾರಿಸಲ್ಪಟ್ಟ ದುಪ್ಪಟ್ಟಾ, ಅವರಿಗೆ ರಾಜ ಕಳೆಯನ್ನು ನೀಡಿತ್ತು. ಇದು ಅವರ ಫ್ಯಾಷನ್ ಮೇಲಿರುವ ಆಸಕ್ತಿ ಹಾಗೂ ಪ್ರಜ್ಞೆಯನ್ನು ಪ್ರತಿಬಿಂಬಿಸುತ್ತಿತ್ತು. ರೇಖಾ ಅವರ ನೋಟವು ಹೈದರಾಬಾದ್‌ನ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿ ತೋರಿಸುವುದಲ್ಲದೆ, ಅವರನ್ನು ಫ್ಯಾಷನ್ ಐಕಾನ್ ಆಗಿಯೂ ಬಿಂಬಿಸಲಾಗಿದೆ. ಇದೇ ತರಹದ ಇನ್ನೊಂದು ಸಮಾರಂಭದಲ್ಲಿ ರೇಖಾ ಧರಿಸಿದ್ದ ಮಿನುಗುವ ತಿಳಿಹಳದಿ ಕಾಂಜೀವರಂ ಸೀರೆಯಿಂದ ತಯಾರಿಸಿದ ಉಡುಪಿನ ಜೊತೆಗೆ ಗೋಲ್ಡನ್ ಪ್ಯಾಂಟ್ ಹೈದರಾಬಾದಿ ಖಾಡಾ ದುಪಟ್ಟಾ ಅವರ ಸೌಂದರ್ಯವನ್ನು ಇಮ್ಮಡಿಗೊಳಿಸಿತ್ತು.

ಈಗೀಗ ಎಲ್ಲ ಸೆಲೆಬ್ರಿಟಿಗಳು, ಮಾಡೆಲಿಂಗ್ ತಾರೆಯರು, ಶ್ರೀಮಂತ ಮನೆತನದ ಹೆಣ್ಣುಮಕ್ಕಳು ಖಾಡಾ ದುಪಟ್ಟಾವನ್ನೇ ಆಯ್ದುಕೊಳ್ಳುತ್ತಿದ್ದಾರೆ. ಮದುವೆ ಸಮಾರಂಭದಲ್ಲಿ ವಿಶಿಷ್ಟವಾಗಿ ಲೆಹೆಂಗಾಗಳು ಅಥವಾ ಸೀರೆಗಳಲ್ಲಿ ಕಾಣಿಸಿಕೊಳ್ಳುವವರು ಅಪರೂಪವಾದ ಮತ್ತು ಅತ್ಯಾಕರ್ಷಕವಾದ ಈ ತರಹದ ಸೂಟ್‌ಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಹೈದರಾಬಾದಿ ತುಂಬು ತೋಳಿನ ಕುರ್ತಾ ಹಾಗೂ ತೋಳಿನ ತುದಿಯಲ್ಲಿ ಬೆಳ್ಳಿಯ ಕಸೂತಿಯಿಂದ ಅಲಂಕಾರ ಹಾಗೂ ಖಾಡಾ ದುಪಟ್ಟಾದ ಉಡುಪು ಟ್ರೆಂಡಿಂಗ್‌ನಲ್ಲಿದೆ. ಇದು ಪರಿಪೂರ್ಣ ಲುಕ್ ನೀಡುತ್ತದೆ. ಇದರ ಜೊತೆಗೆ ಉಡುಪಿಗೆ ಹೊಂದಿಕೆಯಾಗುವಂತಹ ಆಭರಣಗಳನ್ನು ಧರಿಸಿದರೆ ಸಾಕು. ಸಾಮಾನ್ಯ ಮಹಿಳೆಯರೂ ಸೆಲೆಬ್ರಿಟಿ ಲುಕ್ ಪಡೆಯಬಹುದು. ■